<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 28510-2009

ಸಿಡಬ್ಲೂ - 20ಪಿಡಬ್ಲೂ-5

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆಂಪಾರಾಮ |
| ತಂದೆಯ ಹೆಸರು | : | ದಾಸಯ್ಯ |
| ವಯಸ್ಸು | : | 66 ವರ್ಷ |
| ಕೆಲಸ | : | ನಿವೃತ್ತ ಬಿ ಇ ಓ |
| ವಾಸ | : | ಉಲ್ಲಾಳು, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 26-09-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು ಸಪ್ಟೆಂಬರ್ 2015 ರಿಂದ ಡಿಸೆಂಬರ್ 2015 ರವರೆಗೆ ಮಲ್ಲೇಶ್ವರಂ ಉತ್ತರ ವಲಯ -1 ರಲ್ಲಿ ಪ್ರಭಾರ ಬಿಇಓ ಆಗಿ ಕೆಲಸ ನಿರ್ವಹಿಸಿರುತ್ತೇನೆ.

1 ನೇ ಆರೋಪಿ ಗೊತ್ತು. 1 ನೇ ಆರೋಪಿಯು ವಾಣಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ವೇತನಕ್ಕಿಂತ ಅಧಿಕವಾಗಿ ನಕಲಿ ಬಿಲ್ಲುಗಳನ್ನು ಸೃಷ್ಟಿಸಿ ಹಣ ಪಡೆದು ಅವರ ಅಕೌಂಟ್ ಗೆ ಹಾಕಿಕೊಳುತ್ತಿದ್ದರು. ಈ ಸಂಗತಿ ಆಡಿಟ್ ವರದಿಯ ಮೂಲಕ ತಿಳಿದು ಬಂದಿರುತ್ತದೆ. ಎಜಿ ವರದಿಯನ್ನು ಆಧರಿಸಿ ಈ ಬಗ್ಗೆ ನಾನು ಸುಬ್ರಮಣ್ಯನಗರ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ.

ನಂತರ ಪೋಲೀಸರು ಕೆಲವು ದಾಖಲೆಗಳು ಬೇಕು ಎಂದು ಹೇಳಿದ್ದರಿಂದ ದೂರು ದಾಖಲಾಗಿರುವುದಿಲ್ಲ. ನಂತರ ನನ್ನ ಸ್ಥಳಕ್ಕೆ ಸೋಮಶೇಖರ ಎನ್ನುವವರು ಪ್ರಭಾರ ಪಡೆದುಕೊಂಡಿದ್ದು ಅವರು ದೂರು ನೀಡಿದ್ದು ದೂರು ದಾಖಲಾಗಿರುತ್ತದೆ. ಗುರುರಾಜು, ಮಲ್ಲಶೆಟ್ಟಿ, ಶಿವರಾಜು ಮತ್ತು ಹನುಮಂತರಾಜು ರವರು ನಮ್ಮ ಕಚೇರಿಯಲ್ಲಿ ಆ ಸಮಯದಲ್ಲಿ ಕೆಲಸ ಮಾಡುತ್ತಿದ್ದರು. ಈ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u> ಇಲ್ಲಾ ಎಂದು ತಿಳಿಸಿರುತ್ತಾರೆ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ